


# ನಕ್ಕುಬಿಡಿ..!




ಸ್ನೇಹಿತ: ಖಾಲಿ ಹೊಟ್ಟೆಯಲ್ಲಿ ಎಷ್ಟು ಚಪಾತಿ ತಿನ್ನುತ್ತೀಯಾ?

ಸಂತಾ: 7.

ಸ್ನೇಹಿತ: ಆದರೆ ನೀನು ಮೊದಲನೇ ಚಪಾತಿ ತಿಂದ ಮೇಲೆ ಅದು ಖಾಲಿ ಹೊಟ್ಟೆ ಹೇಗಾಗುತ್ತದೆ?

ಸಂತಾನಿಗೆ ಈ ಹಾಸ್ಯ ತುಂಬಾ ಹಿಡಿಸಿತು. ಅವನು ಮನೆಗೆ ಬಂದು ಹೆಂಡತಿಗೆ ಕೇಳಿದ. 'ನೀನು ಖಾಲಿ ಹೊಟ್ಟೆಯಲ್ಲಿ ಎಷ್ಟು ಚಪಾತಿ ತಿನ್ನುತ್ತೀಯಾ?

ಹೆಂಡತಿ: 4.

ಸಂತಾ: ಛೆ. ನೀನು 7 ಎಂದು ಹೇಳಿದ್ದರೆ ನಿನಗೆ ಒಂದು ಒಳ್ಳೆಯ ಜೋಕ್ ಹೇಳುತ್ತಿದ್ದೆ!

***

ಇತಿಹಾಸದ ಮೇಷ್ಟ್ರು: ಎಲ್ಲಿಂದ ಎಲ್ಲಿಯವರೆಗೆ ಮೊಘಲರು ರಾಜ್ಯವಾಳಿದರು?

ಮರಿ ಸಂತಾ: ಪುಟ 155 ರಿಂದ ಪುಟ 170 ರವರೆಗೆ ಇರಬಹುದು ಸರಾ!

***

ಒಂದು ಪತ್ತೇದಾರಿ ಸಂಸ್ಥೆ ಸಂದರ್ಶನಕ್ಕೆ ಮೂವರು ಅಭ್ಯರ್ಥಿಗಳಿದ್ದರು. ಒಬ್ಬ ಅಮೇರಿಕನ್, ಒಬ್ಬ ರಷ್ಯನ್, ಹಾಗೂ ಸಂತಾ. ಸಂದರ್ಶಕರು ಮೂವರಿಗೂ ಒಂದು ಪ್ರಶ್ನೆಯನ್ನು ಕೇಳಿದರು. 'ಜೀಸಸ್‌ನನ್ನು ಕೊಂದವರು ಯಾರು?




ಅಮೇರಿಕಾದವ ಹೇಳಿದ: ರೋಮನರು.

ರಷ್ಯಾದವನು ಹೇಳಿದ: ಯಹೂದಿಗಳು.

ಸಂತಾ ಹೇಳಿದ: 'ನನಗೆ 3 ದಿನ ಸಮಯ ಕೊಡಿ'.

ಸಂದರ್ಶಕರು ಹೇಳಿದರು: 'ಸರಿ'

ಹೊರಗೆ ಬಂದ ಸಂತಾನನ್ನು ಬಂತಾ ಕೇಳಿದ. 'ಸಂದರ್ಶನ ಏನಾಯಿತು?'

ಸಂತಾ ಹೇಳಿದ: ನನಗಾಗಲೇ ಕೆಲಸ ಸಿಕ್ಕಿತು. ಕೆಲಸ ಏನೆಂದರೆ ಜೀಸಸ್‌ನನ್ನು ಕೊಂದವರು ಯಾರು ಎಂದು ಕಂಡು ಹಿಡಿಯುವುದು.

–ನಾಗೇಂದ್ರ, ಬೆಂಗಳೂರು

**ಕಾಫಿ ಡೇಯಲ್ಲಿ**

ಅಮ್ಮ: ಬೇಗ ಬಾರೋ ಸ್ಕೂಲಿಗೆ ಹೋಗಲು ಲೇಟ್ ಆಗುತ್ತೆ.

ಗುಂಡ: ಅದೇಕಮ್ಮ ಅಷ್ಟೊಂದು ಅವಸರ ಮಾಡುತ್ತಿಯಾ, ಸ್ಕೂಲ್ ಬಾಗಿಲು ಸಾಯಂಕಾಲದ ತನಕ ತೆಗೆದಿರುತ್ತದೆ.

***



ಹುಡುಗಿ: ದೇವರೇ ನನ್ನನ್ನು ಬುದ್ಧಿವಂತ ಹುಡುಗ ಪ್ರೀತಿಸುವಂತೆ ಮಾಡು.

ದೇವರು: ಅದು ಸಾಧ್ಯವಿಲ್ಲ ಮಗಳೆ! ಏಕೆಂದರೆ ಬುದ್ಧಿವಂತ ಹುಡುಗ ಯಾವ ಹುಡುಗಿಯನ್ನೂ ಪ್ರೀತಿಸುವುದಿಲ್ಲ.

***

ಗುರು: ನೀನು ಇಂಗ್ಲೀಷ್‌ನಲ್ಲಿ ವೀಕ್ ಇದ್ದಿಯಾ. 10 ಬಾರಿ ಬರೆದುಕೊಂಡು ಬಾ ಅಂದರೆ ಬರಿ 2 ಬಾರಿ ಬರೆದುಕೊಂಡು ಬಂದಿದ್ದಿಯಾ?

ಶಿಷ್ಯ: ನಾನು ಮ್ಯಾಥ್ಸ್‌ನಲ್ಲೂ ವೀಕ್ ಸಾರ್.

–ಎಂ.ಎಸ್. ಧರ್ಮೇಂದ್ರ, ಬೆಂಗಳೂರು